ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತುಅಂಗೀಕರಣ ಪರಿಷತ್ತು(ರಿ)

**ಕೆ.ಎಸ್.ಇ.ಇ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03**

**ದೂರವಾಣಿ ಸಂಖ್ಯೆ: 23341615, 23562283, ಫ್ಯಾಕ್ಸ್: 080–23347670 e-mail:ksqaacbangalore@gmail.com**

ಸಂಖ್ಯೆ: ಕೆ5/ಉ.ನಿ.ಕಹೊ.ಆ.ವಾ.ಪ.ಬಗ್ಗೆ/08/21–22 ದಿನಾಂಕ: 13.01.2022

**ದರಪಟ್ಟಿ ಆಹ್ವಾನ ಪತ್ರ**

**ವಿಷಯ:** ಇಂಡಿಕಾ ಕಾರು (ನಾನ್ ಎ.ಸಿ)/ತತ್ಸಮಾನ ವಾಹನವನ್ನು ಕೆ.ಎಸ್.ಕ್ಯು.ಎ.ಎ.ಸಿ ಕಛೇರಿ ಕಾರ್ಯಕ್ಕಾಗಿ ಮೂರು ತಿಂಗಳ ಅವಧಿಗೆ ಮಾತ್ರ ದರಪಟ್ಟಿ ಆಹ್ವಾನಿಸುವ ಬಗ್ಗೆ,

*****

ಉಪನಿರ್ದೇಶಕರ ಕಛೇರಿ, ಕೆ.ಎಸ್.ಕ್ಯು.ಎ.ಎ.ಸಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡ ರಸ್ತೆ ಮಲ್ಲೇಶ್ವರಂ ಬೆಂಗಳೂರು ಇಲ್ಲಿಗೆ ಕಛೇರಿಯ ದೈನಂದಿನ ಕಾರ್ಯಕ್ಕಾಗಿ ದಿನಾಂಕ:01.02.2022 ರಿಂದ 30.04.2022ರವರೆಗೆ ಮೂರು ತಿಂಗಳ ಅವಧಿಗೆ ಮಾತ್ರ ಇಂಡಿಕಾ ಕಾರು(ನಾನ್ ಎ.ಸಿ)/ತತ್ಸಮಾನ ವಾಹನವನ್ನು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು, ಅರ್ಹ ಸಂಸ್ಥೆಗಳಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

**ಷರತ್ತುಗಳು;**

1. ಅನುಮೋದನೆಯಾದ ದರವು ಕರಾರು ಒಪ್ಪಂದ ದಿನಾಂಕದಿಂದ ಮೂರು ತಿಂಗಳ ಅವಧಿಯವರೆಗೆ ಚಾಲ್ತಿಯಲ್ಲಿರುತ್ತದೆ.
2. ನಮೂದಿಸಿದ ಒಟ್ಟು ದರದಲ್ಲಿ ಅತಿ ಕಡಿಮೆ ದರ ನಮೂದಿಸಿದ ಸಂಸ್ಥೆಯನ್ನು ಸದರಿ ಕಾರ್ಯಕ್ಕೆ ಆಯ್ಕೆ ಮಾಡಲಾಗುವುದು.
3. ವಾಹನಕ್ಕೆ ದರ ನಮೂದಿಸುವಾಗ ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ ದರ ನಮೂದಿಸತಕ್ಕದ್ದು.
4. ದರಪಟ್ಟಿಯಲ್ಲಿ ನಮೂದಿಸಿರುವ ದರವೇ ಅಂತಿಮವಾಗಿದ್ದು, ನಂತರದಲ್ಲಿ ಹೆಚ್ಚುವರಿ ದರಕ್ಕೆ ಬಿಲ್ ಸಲ್ಲಿಸಲು ಅವಕಾಶವಿರುವುದಿಲ್ಲ.
5. ಮಂಡಳಿಯು ಸೂಚಿಸಿದ ದಿನಾಂಕದಿಂದ ತಿಳಿಸಿದ ಸಮಯಕ್ಕೆ ಸರಿಯಾಗಿ ಹಾಗೂ ಸೂಚಿಸಿದ ಸ್ಥಳಕ್ಕೆ ವಾಹನವನ್ನು ಒದಗಿಸಬೇಕು.
6. ನೀಡಿದ ವಾಹನ ಮತ್ತು ಚಾಲಕನನ್ನೇ ಮುಂದುವರೆಸತಕ್ಕದ್ದು. ಇದರಲ್ಲಿ ಯಾವುದೇ ಸಮಸ್ಯೆ ಇದ್ದಲ್ಲಿ ಮಂಡಳಿಗೆ ತಿಳಿಸಿ ಕೂಡಲೇ ಬದಲಿ ವ್ಯವಸ್ಥೆ ಮಾಡುವುದು.
7. ಒಂದು ವೇಳೆ ಸಂಸ್ಥೆಯು ನಿಗಧಿತ ಸಮಯಕ್ಕೆ ವಾಹನವನ್ನು ಒದಗಿಸಲು ವಿಫಲವಾದಲ್ಲಿ ಮಂಡಳಿಯು ಮಾಡಿಕೊಳ್ಳುವ ಪ್ರತ್ಯೇಕ ವ್ಯವಸ್ಥೆಯಿಂದ ಮಂಡಳಿಗೆ ಉಂಟಾಗುವ ನಷ್ಟವನ್ನು ಮಂಡಳಿಯು ನಿಗಧಿಪಡಿಸುವ ದಂಡದೊಂದಿಗೆ ಪಾವತಿಸಲು ಸಂಸ್ಥೆಯು ಬದ್ದವಾಗಿರಬೇಕು. ಇಲ್ಲವಾದಲ್ಲಿ ಸದರಿ ಮೊತ್ತವನ್ನು ಮಂಡಳಿಯು ಮುಂದೆ ಪಾವತಿಸಲಾಗುವ ಬಿಲ್‌ನಲ್ಲಿ ಅಥವಾ ಭದ್ರತಾ ಠೇವಣಿಯಲ್ಲಿ ಕಟಾಯಿಸಲಾಗುವುದು.
8. ಸಂಸ್ಥೆಯು ಒದಗಿಸುವ ವಾಹನಗಳು ಸುಸ್ಥಿತಿಯಲ್ಲಿರಬೇಕು. ರಾಜ್ಯ ಪರವಾನಿಗೆ ಪಡೆದಿರಬೇಕು ಹಾಗೂ ಕಾಂಪ್ರಹೆನ್ಸಿವ್ ವಿಮಾ ಪಾಲಿಸಿ ಮತ್ತು ರಸ್ತೆ ಪರವಾನಿಗೆಯು ಚಾಲ್ತಿಯಲ್ಲಿರಬೇಕು.
9. ಸಂಸ್ಥೆಯು ಒದಗಿಸುವ ವಾಹನಕ್ಕೆ ಸಂಬಂಧಿಸಿದ ವಾಹನ ಚಾಲಕರು ವಾಹನ ಚಾಲನೆಯ ಲೈಸನ್ಸ್ ಹೊಂದಿರಬೇಕು ಮತ್ತು ಪೂರ್ಣ ಅನುಭವ ಹೊಂದಿರಬೇಕು. ಅಲ್ಲದೆ ಸೇವೆ ಪಡೆಯುತ್ತಿರುವವರೊಂದಿಗೆ ಅತ್ಯಂತ ಜವಾಬ್ದಾರಿಯುತವಾಗಿ ಸೌಜನ್ಯ ಶಿಸ್ತು ಮತ್ತು ಸಂಯಮದಿಂದ ವರ್ತಿಸಿ ಸಹಕರಿಸುವಂತೆ ನಡೆದುಕೊಳ್ಳಬೇಕು.
10. ನಿರ್ವಹಣಾ ವೆಚ್ಚವನ್ನು ತಿಂಗಳಿಗೊಮ್ಮೆ ಪಾವತಿಸಲಾಗುವುದು.

11. ಸದರಿ ಕಾರ್ಯಕ್ಕೆ ಮಂಡಳಿಯು ಯಾವುದೇ ಮುಂಗಡ ಹಣ ನೀಡುವುದಿಲ್ಲ. ಬಿಲ್ ಪಾವತಿಯಲ್ಲಿ ನಿಯಮಾನುಸಾರ ಆದಾಯ ತೆರಿಗೆ ಮತ್ತು ಜಿ.ಎಸ್.ಟಿ ತೆರಿಗೆಯನ್ನು ಕಟಾಯಿಸಲಾಗುವುದು.

ಮೇಲ್ಕಂಡ ಷರತ್ತುಗಳನ್ವಯ **"ಇಂಡಿಕಾ ಕಾರು/ತತ್ಸಮಾನ ವಾಹನದ"** ಪ್ರತಿ ದಿನ ಕಛೇರಿಯ ದೈನಂದಿನ ಬಳಕೆಗೆ ಮೂರು ತಿಂಗಳ ಅವಧಿಗೆ ಬಾಡಿಗೆ ಆಧಾರದ ಮೇಲೆ ವಾಹನ ಒದಗಿಸುವ ಕಾರ್ಯಕ್ಕೆ ನಿಮ್ಮ ಸಂಸ್ಥೆಯ ಕನಿಷ್ಟ ದರಗಳ ಪಟ್ಟಿಯನ್ನು ದಿನಾಂಕ: 21 .01.2022ರೊಳಗಾಗಿ ಸೀಲು ಮಾಡಿದ ಲಕೋಟೆಯಲ್ಲಿ **ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು(ರಿ), 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು 560003** ಇವರಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಹಾಗೂ ಲಕೋಟೆಯ ಮೇಲೆ **"ಉಪನಿರ್ದೇಶಕರ ಕಛೇರಿ, ಕೆ.ಎಸ್.ಕ್ಯು.ಎ.ಎ.ಸಿ, ಇಂಡಿಕಾ (ನಾನ್ ಎ.ಸಿ) ಕಾರು ಒದಗಿಸುವ ಕಾರ್ಯಕ್ಕೆ ದರಪಟ್ಟಿ ಸಲ್ಲಿಸುತ್ತಿರುವ ಕುರಿತು."** ಎಂದು ನಮೂದಿಸುವುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಈ ಮೇಲಿನ ವಿಳಾಸ ಅಥವಾ ದೂರವಾಣಿ ಸಂಖ್ಯೆ 080-23341615 ಪಡೆಯಬಹುದಾಗಿದೆ.

ಕಾರ್ಯ ನಿರ್ವಾಹಕ ನಿರ್ದೇಶಕರು,
ಕೆ.ಎಸ್.ಕ್ಯು.ಎ.ಎ.ಸಿ,

<u>ಪ್ರತಿಗಳು</u>

1.ಮಂಡಳಿಯ ಸೂಚನಾ ಫಲಕಕ್ಕೆ.

2.ಕಛೇರಿ ಪ್ರತಿ

**ಕರ್ನಾಟಕ ಸರ್ಕಾರ**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತುಅಂಗೀಕರಣ ಪರಿಷತ್ತು(ರಿ)**
**ಕೆ.ಎಸ್.ಇ.ಇ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03**
**ದೂರವಾಣಿ ಸಂಖ್ಯೆ: 23341615, 23562283, ಫ್ಯಾಕ್ಸ್: 080–23347670 e-mail:ksqaacbangalore@gmail.com**

ಸಂಖ್ಯೆ: ಕೆ5/ಉ.ನಿ.ಕಹೊ.ಆ.ವಾ.ಪ.ಬಗ್ಗೆ/08/21-22 ದಿನಾಂಕ: 13.01.2022

ಇಂಡಿಕಾ ಕಾರು(ನಾನ್ ಎ.ಸಿ)/ ತತ್ಸಮಾನ ವಾಹನವನ್ನು ಒದಗಿಸುವ ಸಂಬಂಧ ಆಹ್ವಾನಿಸಲಾದ ದರಪಟ್ಟಿ

| ಬೆಂಗಳೂರು ನಗರದಲ್ಲಿ ಇಂಡಿಕಾ/ ತತ್ಸಮಾನ ಕಾರು | | |
|---|---|---|
| ಎಲ್ಲಾ ತೆರಿಗೆ ಸೇರಿ ಒಂದು ತಿಂಗಳಿಗೆ ಕನಿಷ್ಠ ದರ 2500 ಕಿ.ಮೀ ಅಥವಾ 300 ಗಂಟೆಗೆ | ಪ್ರತಿ ಹೆಚ್ಚುವರಿ ಕಿ.ಮೀ.ಗೆ ದರ | ಹೆಚ್ಚುವರಿ ಅವಧಿಗೆ |
| | | |
| ಬೆಂಗಳೂರು ನಗರ ಪ್ರದೇಶಕ್ಕೆ ಚಾಲಕರಿಗೆ ದೈನಿಕ ಬಾಟಾ ನೀಡಲಾಗುವುದಿಲ್ಲ. | | |

ಕಾರ್ಯ ನಿರ್ವಾಹಕ ನಿರ್ದೇಶಕರು,
ಕೆ.ಎಸ್.ಕ್ಯು.ಎ.ಎ.ಸಿ,